International Journal of Kannada Research
www.kannadajournal.com

ISSN: 2454–5813
IJKR 2021; 7(3): 01-06
© 2021 IJKR
www.kannadajournal.com
Received: 01-05-2021
Accepted: 03-06-2021

**ಬಾಲರಾಜು ಬಿ.ವಿ.**
ಸಹಾಯಕ ಪ್ರಾಧ್ಯಾಪಕರು,
ಕ್ರೈಸ್ಟ್ ಅಕಾಡೆಮಿ
ಇನ್ಸ್ಟಿಟ್ಯೂಟ್ ಫಾರ್
ಅಡ್ವಾನ್ಸ್ಡ್ ಸ್ಟಡೀಸ್
ಕೊಪ್ಪ - ಬೇಗೂರು ರಸ್ತೆ,
ಪ್ರಕಟಣೆ, ಬೆಂಗಳೂರು,
ಕರ್ನಾಟಕ, ಭಾರತ

Corresponding Author:
**ಬಾಲರಾಜು ಬಿ.ವಿ.**
ಸಹಾಯಕ ಪ್ರಾಧ್ಯಾಪಕರು,
ಕ್ರೈಸ್ಟ್ ಅಕಾಡೆಮಿ
ಇನ್ಸ್ಟಿಟ್ಯೂಟ್ ಫಾರ್
ಅಡ್ವಾನ್ಸ್ಡ್ ಸ್ಟಡೀಸ್
ಕೊಪ್ಪ - ಬೇಗೂರು ರಸ್ತೆ,
ಪ್ರಕಟಣೆ, ಬೆಂಗಳೂರು,
ಕರ್ನಾಟಕ, ಭಾರತ

# ಜನಪದ ನಂಬಿಕೆಗಳು

**ಬಾಲರಾಜು ಬಿ.ವಿ.**

ಆಂಗ್ಲಭಾಷೆಯ ಫೋಕ್‌ಲೋರ್ ಪದಕ್ಕೆ ಸಮಾನವಾಗಿ ಕನ್ನಡದಲ್ಲಿ ಜಾನಪದ ಎಂಬ ಪದವನ್ನು ಬಳಸಲಾಗುತ್ತದೆ. 1846ರಲ್ಲಿ 'ವಿಲಿಯಂ ಥಾಮ್ಸ್ ಫೋಕ್‌ಲೋರ್' ಎಂಬ ಪದವನ್ನು ರೂಪಿಸಿದನು. ಕನ್ನಡದಲ್ಲಿ ಜನಪದ ಮತ್ತು ಜಾನಪದ ಎಂಬ ಎರಡು ಪದಗಳು ಬಳಕೆಯಲ್ಲಿದ್ದು, ಎರಡೂ ಪ್ರತ್ಯೇಕ ಅರ್ಥ ವಲಯವಿದೆ. ಈ ಅಂಶವನ್ನು ಡಾ.ಹಾ.ಮಾ. ನಾಯಕರು ತಮ್ಮ ಜಾನಪದ ಕಿರು ಹೊತ್ತಿಗೆಯಲ್ಲಿ ವಿಶದಪಡಿಸಿದ್ದಾರೆ. ಸರಳವಾಗಿ ಹೇಳುವುದಾದರೆ ಜನಪದ ಎನ್ನುವುದು ಬಿಡಿಬಿಡಿಯಾದ ಅಂಶಗಳಿಗೂ, ಜಾನಪದ ಎನ್ನುವುದು ಇಡಿಯಾದ ವಿಭಾಗಕ್ಕೂ ಅನ್ವಯಿಸುತ್ತದೆ. ಜನಪದ ಗೀತೆ, ಜನಪದ ಕಲೆ, ಜನಪದ ಸಾಹಿತ್ಯ, ಜನಪದ ಆಚರಣೆ, ಜನಪದ ನಂಬಿಕೆ ಹೀಗೆ ಬಿಡಿಬಿಡಿಯಾದ ಅಂಗಗಳಿಗೆ 'ಜನಪದ' ಎಂಬ ಪದ ಬಳಕೆಯಾದರೆ, ಜನಪದದ ಎಲ್ಲವನ್ನೂ ಒಳಗೊಂಡ ಸಮಗ್ರ ಘಟಕವು ಜಾನಪದ ಎನಿಸುತ್ತದೆ. ಜನಪದ ಮತ್ತು ಜಾನಪದವೆಂದ ಕೂಡಲೆ ಅದು ಮೌಖಿಕ ಪರಂಪರೆ ಹಾಗೂ ಗ್ರಾಮೀಣ ಪರಂಪರೆಗೆ ಸಂಬಂಧಿಸಿದ್ದು ಎಂಬ ತಿಳುವಳಿಕೆ ರೂಢಿಯಲ್ಲಿದೆ.

ಜಾನಪದದಲ್ಲಿ ಸಾಹಿತ್ಯ,ಕಲೆ, ಆಟ, ಹಬ್ಬ, ನಂಬಿಕೆ, ಆಚರಣೆ ಎಲ್ಲವೂ ಸೇರುತ್ತವೆ. ಜನಪದ ನಂಬಿಕೆಗಳು ಜಾನಪದದ ಒಂದು ಭಾಗ. ಜಾನಪದವು ಸಂಸ್ಕೃತಿಯ ಒಂದು ಅಂಗ. ಜಾನಪದವನ್ನು ಸಾಹಿತ್ಯಕ ಬಗೆ, ಭಾಷಿಕ ಬಗೆ, ಕ್ರಿಯಾತ್ಮಕ ಬಗೆ ಮತ್ತು ವೈಜ್ಞಾನಿಕ ಬಗೆಯೆಂದು ಅಧ್ಯಯನದ ಸೌಲಭ್ಯಕ್ಕಾಗಿ ವಿಭಾಗಿಸಬಹುದು.

ವೈಜ್ಞಾನಿಕ ವರ್ಗದಲ್ಲಿ ಬರುವ ಜನಪದ ನಂಬಿಕೆಗಳು ಜನಜೀವನದಲ್ಲಿ ಅಸಾಧಾರಣವಾದ ಪಾತ್ರವನ್ನು ವಹಿಸುತ್ತವೆ. ಜನಪದರ ಮನೋಭಾವಕ್ಕೆ ಅನುಗುಣವಾಗಿ ಸಮಾಜದ ಎಲ್ಲ ವರ್ಗದ ಜನರ ಮೇಲೂ ನಂಬಿಕೆಗಳು ಪ್ರಭಾವ ಬೀರುತ್ತವೆ. ಸುಸಂಸ್ಕೃತರಾಗಲಿ ಅಸಂಸ್ಕೃತರಾಗಲಿ, ವಿದ್ಯಾವಂತರಾಗಲಿ-ಅವಿದ್ಯಾವಂತರಾಗಲಿ ಎಲ್ಲ ಬಗೆಯ ಜನರಲ್ಲೂ ಜನಪದ ನಂಬಿಕೆಗಳು ನಂದಾದೀವಿಗೆಯಂತೆ ಕಂಗೊಳಿಸುತ್ತವೆ.

ಜನಪದ ನಂಬಿಕೆಗಳು ಜನಜೀವನದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳು. ಜನಪದರ ಜೀವನಾನುಭವದ ಮೂಸೆಯಿಂದ ಮೂಡಿಬಂದು ಅವರ ಬದುಕಿನಲ್ಲಿ ಬೆರೆತು ಜೀವಂತವಾಗಿವೆ.

ಜನಪದ ನಂಬಿಕೆಗಳು ಜನತಾನುಭಾವದ ಅಭಿವ್ಯಕ್ತಿ, ಅವರ ಪರಂಪರಾಗತ ಜ್ಞಾನಸುಧೆ, ಜನಪದ ನಂಬಿಕೆಗಳು ಜನತೆಯ ಬದುಕನ್ನೇ ನಿಯಂತ್ರಿಸಿ, ನಿರ್ದೇಶಿಸುವ ವಿಶಿಷ್ಟಶಕ್ತಿಯಾಗಿ ಮತ್ತಷ್ಟು ಹರಿತವಾಗಿ ಪ್ರಖರವಾಗಿ ಜನತೆಯ ಜೀವನದಲ್ಲಿ ಆಳವಾಗಿ ಬೇರುಬಿಟ್ಟಿವೆ. ಜನತೆಯ ಬದುಕಿಗೆ ವಜ್ರಕವಚವಾಗಿವೆ ಎನ್ನಿಸುತ್ತದೆ. ಜನಪದ ನಂಬಿಕೆಗಳು ಸಂಸ್ಕೃತಿಯ ತಾಯಿಬೇರು, ಏಕೆಂದರೆ ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ಎಲ್ಲ ಬಗೆಯ ವಿಶೇಷ ಜ್ಞಾನವು ನಂಬಿಕೆಗಳು ಆಧಾರದ ಮೇಲೆ ಹುಟ್ಟಿ ಬೆಳವಣಿಗೆ ಹೊಂದಿ ಬೆಳಗುತ್ತದೆ.

ಜನಪದ ನಂಬಿಕೆಗಳ ಉಗಮ ಮಾನವ ಹುಟ್ಟಿನೊಂದಿಗೆ ಆಯಿತು. ಮಾನವ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡಾಗಲೇ ಭಾಷೆಯ ಜೊತೆಯಲ್ಲಿಯೇ ನಂಬಿಕೆಗಳೂ ಹುಟ್ಟಿದವು. ಜನಪದ ನಂಬಿಕೆಗಳ ಹುಟ್ಟಿಗೆ ಮೂಲಕಾರಣ ಮಾನವನ ಮಾನಸಿಕ ತಳಮಳ. ಈ ತಳಮಳಕ್ಕೆ ಕಾರಣ ನೈಸರ್ಗಿಕ ಶಕ್ತಿ. ಅತಿಮಾನುಷ ಶಕ್ತಿಯ ಭಯ. ಸಾಮಾನ್ಯ ಮತ್ತು ಅಸಾಮಾನ್ಯ ಶಕ್ತಿಗಳಲ್ಲಿ ಕಂಡುಬಂದ ವ್ಯತ್ಯಾಸಗಳೇ ಜನಪದ ನಂಬಿಕೆಗಳ ತಾಯಿ ಬೇರಾಯಿತು. ಸಿಡಿಲು, ಮಿಂಚು,ನದಿ, ಬಿರುಗಾಳಿ, ಅಗ್ನಿ ಇವುಗಳಿಂದ ಭೀತಿಗೆ ಒಳಗಾದ ಮನುಷ್ಯ ಭಯದಿಂದ ಪೂಜಿಸಲಾರಂಭಿಸಿದ. ಅವುಗಳನ್ನು ಒಲಿಸಿಕೊಳ್ಳಲು ಆಗ ಅವರಲ್ಲವೂ ದೈವತ್ವ ಪಡೆದವು. ಸಿಡಿಲಿನ ಬಗ್ಗೆ ಇರುವ ಈ ನಂಬಿಕೆಯನ್ನು ಗಮನಿಸಿ-ಅರ್ಜುನ ಬಾಣ ಹೊಡೆದಾಗ ಸಿಡಿಲು ಬರುತ್ತೆ ಅರ್ಜುನನ ತಾಯಿ ಕುಂತಿ ಮಗನಿಗೆ ಹೇಳ್ತಲೆ 'ಬಸುರಿ ಬಾಣಂತಿಯರು ಇರ್ತಾರೆ, ಅವರಿಗೆ ಸಿಡಿಲು ಬಡಿದೀತು, ಜೋಪಾನವಾಗಿ ಬಾಣ ಹೊಡೆ' ಅಂತ ಇಂಥ ನಂಬಿಕೆಗಳು ಭಯದಿಂದ ಹುಟ್ಟಿದವು ಎಂಬುದು ಸ್ಪಷ್ಟವಲ್ಲದೆ.

ಸಮಾಜದಲ್ಲಿ ಸುಭದ್ರ ಸ್ಥಾನಗಳಿಸಿರುವಂಥವರನ್ನು ,ಮಹಾಜ್ಞಾನಿಗಳು ಮಹಾಮಠಾಧೀಶರು ಋಷಿ ಸಮಾನರೆಂದು ಭಾವಿಸಿ ಪೂಜಿಸಿ ಅವರ ಅಭಿಮತಕ್ಕೆ ಗೌರವ ಸಲ್ಲಸುವ ಬಹುಪಾಲು ನಂಬಿಕೆಗಳು ಹುಟ್ಟಿವೆ. ಪರಂಪರೆಯಿಂದ ಬಂದ ಶಕುನ ಶಾಸ್ತ್ರಗಳು ಜನಪದ ನಂಬಿಕೆಯ ವಲಯದಲ್ಲಿರುತ್ತವೆ. ಆದರೆ ಜ್ಯೋತಿಷ ಹೊರತಾಗುತ್ತದೆ. ಏಕೆಂದರೆ ಅದು ಶಿಷ್ಟ ಸಂಪ್ರದಾಯದಿಂದ ಬಂದದ್ದು, ಕೆಲವು ಜನಪದ ನಂಬಿಕೆಗಳು ಐತಿಹ್ಯ ಪುರಾಣ, ವಿವರಣಾತ್ಮಕ ಕಥೆಗಳ ಹಿನ್ನೆಯಲ್ಲಿ ಹುಟ್ಟಿರುತ್ತವೆ.

ಜನಪದ ನಂಬಿಕೆಗಳು ಧಾರ್ಮಿಕ ಸಾಂಸ್ಕೃತಿಕ ಹಾಗೂ ವೈಯಕ್ತಿಕವಾಗಿ ಹುಟ್ಟಿ ಬೆಳೆಯುತ್ತವೆ. ಪ್ರತಿಯೊಂದು ರಾಷ್ಟ್ರದಲ್ಲೂ ಜನಪದ ನಂಬಿಕೆಗಳಿವೆ. ಜನಪದ ನಂಬಿಕೆಗಳನ್ನು ಕೆಲವರು ಮೂಢ ನಂಬಿಕೆಗಳು ಎನ್ನುತ್ತಾರೆ. ಇದನ್ನು ಒಪ್ಪಲಾಗದು, ಏಕೆಂದರೆ ಇಂಗ್ಲೀಷ್ ನಲ್ಲಿ 'ಬೀಲೀವ್' ಜನಪದ ನಂಬಿಕೆಗಳು. ಸೂಪರ್ಸ್ಟೀಷಿಯಸ್ ಅಂದರೆ ಮೂಢನಂಬಿಕೆಗಳು ಎಂದು ಪ್ರತ್ಯೇಕ ಅರ್ಥ. ಪ್ರತ್ಯೇಕವಾಗಿ ಆವೆರಡೂ ಪದಗಳೂ ಬಳಕೆಯಾಗುತ್ತಿವೆ. ಮೂಢನಂಬಿಕೆಗಳು ಧಾರ್ಮಿಕ ಪದ್ಧತಿಗಳು ಆಚರಣೆ, ಮಾಂತ್ರಿಕ ವಿಷಯಗಳ ಹಿನ್ನೆಯಲ್ಲಿ ಬೆಳೆದು ಬಂದಿರುತ್ತವೆ. ಜನಪದ ನಂಬಿಕೆಗಳು ಮಾನವನ ಎಲ್ಲ ಬಗೆಯ ಕಾರ್ಯಕ್ಷೇತ್ರಗಳ ಮಾನವನ ಬದುಕಿನ ಬಗೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುತ್ತವೆ.

ನಾವೆಲ್ಲರೂ ಅರಿವು ಇದ್ದೋ ಇಲ್ಲದೆಯೋ ಜನಪದ ನಂಬಿಕೆಗಳಿಗೆ ಒಳಗಾಗಿದ್ದೇವೆ. ಹಾಗಾದರೆ ಜನಪದ ನಂಬಿಕೆ ಎಂದರೇನು? ಒಬ್ಬೊಬ್ಬ ವಿದ್ವಾಂಸನೂ ತನ್ನ ಆಲೋಚನಾ ಶಕ್ತಿಗೆ ಅನುಸಾರವಾಗಿ ವ್ಯಾಖ್ಯಾನ ಮಾಡುತ್ತಾನೆ.

ಗಾರ್ಡೀನರ್: 'ಭಾವಾಜೀವಿಯ ವರದಹಸ್ತ ಎಂದೂ',ಹಕ್ಸ್‌ಲಿ 'ರೂಪ ಬದಲಾಗಿಯೂ ಸ್ವರೂಪ ಉಳಿಯುತ್ತದೆ.'ಎಂದೂ, ಹ್ಯಾಮಿಲ್ಟನ್ ಮಾನಸಿಕ ಸ್ಥಿತಿಯನ್ನು ಸೂಚಿಸುವುದು ಎಂದೂ, ಪ್ರಸಿದ್ಧ ಮನಶ್ಯಾಸ್ತ್ರಜ್ಞ ಬಗೇಹಾಟ್ ಒಂದು ವಿಧವಾದ ಮೊದಲ ಮಾನಸಿಕ ಅನುಭವ. ಇದು ಭಾವಾನಾತ್ಮಕವಾಗಿರುತ್ತದೆ. ಅನೇಕ ಮಾನಸಿಕ ಅಂಶಗಳನ್ನು ಅವಲಂಭಿಸಿರುತ್ತವೆ. ಇದಕ್ಕೆ ತನ್ನದೇ ಆದ ಸ್ಪಷ್ಟವಾದ ಒಂದು ಸ್ವರೂಪವಿದೆ ಎನ್ನುತ್ತಾನೆ. ಜೇಮ್ಸ್‌ವಿಲ್ ನಂಬಿಕೆಯು ವಾಸ್ತವಿಕ ಆಧಾರದ ಮೇಲೆ ನಿಂತಿದೆ ಎಂದೂ ಬಾಲ್ಡವಿನ್ ಒಂದು ವಸ್ತು ನಿಷ್ಠವಾದ ತೀರ್ಪು ಎಂದೂ ಕರೆಯುತ್ತಾನೆ.

ಜನಪದ ನಂಬಿಕೆ ವ್ಯಕ್ತಿಯ ಮನೋಭಾವಕ್ಕೆ ಒಪ್ಪಗೆಯಾಗುವ ವಿಷಯ ಒಂದು ಬಗೆಯ ಆತ್ಮ ವಿಶ್ಲೇಷಣೆಗೆ ಬುದ್ಧಿ, ಪೂರ್ವಕವಾದ ಕ್ರಿಯೆ ವ್ಯಕ್ತಿಯ ಅನುಭವಗಳ ವಾಸ್ತವಿಕ ಮೌಲ್ಯಗಳ ಇಲ್ಲವೆ ಧ್ಯೇಯ ಧೋರಣೆಗಳ ಒಂದು ಮಾನಸಿಕ ಸ್ಥಿತಿ. ಒಂದು ಹೇಳಿಕೆಯ ಸತ್ಯಾಂಶದ ಬಗ್ಗೆ ವ್ಯಕ್ತಿಯು ತಾಳುವ ಬುದ್ಧಿಯ ಕಸರತ್ತು- ಜನರ ನಂಬಿಕೆ. ಇದನ್ನು ಸೂತ್ರರೂಪದಲ್ಲಿ

ಹೀಗೆ ಹೇಳಬಹುದು. ಪರಂಪಾರಾನುಗತವಾಗಿ ಶ್ರದ್ಧಾ ಮೂಲವಾದ ಸಾಮೂಹಿಕ ಭಾವ ಪ್ರಧಾನವಾದ ಕಾರ್ಯಕಾರಣ ಸಂಬಂಧವಾದ ಸಂಬಂಧವಾದ ಭೂತ ವರ್ತಮಾನ ಅಥವಾ ಭವಿಷ್ಯತ್ ಕಾಲದ ಒಪ್ಪಿ ಫಲಿತಾಂಶವನ್ನು ಸೂಚಿಸುವ ಕಲ್ಪನೆ- ಜನಪದ ನಂಬಿಕೆಗಳು.

ನಂಬಿಕೆಗಳು ಜನಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಪ್ರಯಾಣ ಮಾಡುವಾಗ ತುಂಬಿದ ಕೊಡ ,ಮುತ್ತೈದೆಯರು ಎದುರಾದರೆ ಶುಭ, ಖಾಲಿ ಕೊಡ, ವಿಧವೆಯರಾದರೆ ಅಶುಭವೆಂದು ಪ್ರಯಾಣವನ್ನೇ ನಿಲ್ಲಿಸುವವರು, ಈಗಲೂ ಬಹು ಮಂದಿ ಇದ್ದಾರೆ. ಹೆಣ್ಣು ನೋಡಲು ಹೋಗುವಾಗಲೂ ಶುಭ ಶಕುನಗಳನ್ನು ಗಮನಿಸುತ್ತಾರೆ. ಒಂದು ಮನೆಯಲ್ಲಿ ಒಬ್ಬನಿಗೆ ಒಳ್ಳೆಯ ಕೆಲಸ ಒಳ್ಳೆಯ ಫಲ ಬಂದರೆ ಆ ಮನೆ ತನದ ಅದೃಷ್ಟ ಎಂದು ನಂಬುತ್ತಾನೆ. ಜೀವನದ ಎಲ್ಲ ರಂಗದಲ್ಲೂ ನಂಬಿಕೆಗಳು ಚಾಲ್ತಿಯಲ್ಲಿವೆ.

ಹೆಚ್ಚಿನ ಸಂಖ್ಯೆಯಲ್ಲಿ ಸಿಗುವ ಜನಪದ ನಂಬಿಕೆಗಳನ್ನು ವಸ್ತುವಿಗೆ ಅನುಗುಣವಾಗಿ ವಿಂಗಡಿಸಬಹುದು. ಒಂದು ನಂಬಿಕೆ ಯಾವ ವಸ್ತುವಿನ ಮೇಲೆ ಹುಟ್ಟಿದೆ ಅದು ಏನನ್ನು ಹೇಳುತ್ತದೆ. ಅದು ಯಾವ ಸಂದರ್ಭಗಳಲ್ಲಿ ಬಳಕೆಯಾಗುತ್ತದೆ. ಅದು ಜನರ ಮೇಲೆ ಏನು ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನೆಲ್ಲಾ ತಿಳಿಯಬೇಕಾದರೆ ನಂಬಿಕೆಗಳನ್ನು ವರ್ಗೀಕರಿಸುವುದು ಮುಖ್ಯ.

ದೇವರು ,ಪೂಜೆ, ದೆವ್ವಗಳು ಯಾತ್ರೆ ಮತ್ತು ತೀರ್ಥಕ್ಷೇತ್ರ ಇವುಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ಅತಿಮಾನುಷ ನಂಬಿಕೆಗಳು ಎನ್ನಬಹುದು. ಅಂದರೆ ಮನುಷ್ಯ ಶಕ್ತಿಗೆ ಇರದ ನಂಬಿಕೆಗಳು ಎಂದರ್ಥ. ದೇವರು ಮೇಲಿನ ಹೂ ಬಲಕ್ಕೆ ಬಿದ್ದರೆ ಒಳ್ಳೆಯದು, ಎಡಕ್ಕೆ ಬಿದ್ದರೆ ಕೆಟ್ಟದ್ದು, ಕಳಸಕ್ಕೆ ತುಂಬಿದ ಕೊಡದ ನೀರನ್ನು ಹಾಕಿ ಪೂಜಿಸಬೇಕು. ಚಪ್ಪಲಿಯನ್ನು ತಲೆದಸಿಯಲ್ಲಿ ಮಡಿಕೊಂಡು ಮಲಗಿದರೆ ದೆವ್ವಗಳು ಹತ್ತಿರ ಬರೋದಿಲ್ಲ. ತೀರ್ಥಕ್ಷೇತ್ರದಲ್ಲಿ ಯಾರಾದರೂ ಸತ್ತರೆ ಊರಿಗೆ ತರಬಾರದು, ಅಲ್ಲಿಯೇ ಹೂತಾಕಬೇಕು. ಇಂಥ ನಂಬಿಕೆಗಳೆಲ್ಲ ಅತಿಮಾನುಷ ನಂಬಿಕೆಗಳ ಗುಂಪಿಗೆ ಸೇರುತ್ತವೆ.

ಹಬ್ಬಗಳು, ನಿದ್ರೆ, ಮತ್ತು ಕನಸು ಕಾಲ ಮತ್ತು ವಾರಗಳು, ಹುಟ್ಟು ಮತ್ತು ಒಡಹುಟ್ಟು ಮದುವೆ, ಸಾವು ಮಾನವ ಪುರುಷರು, ಸ್ತ್ರೀಯರು ಬಸುರಿ ಬಾಣಂತಿ ಮಕ್ಕಳು ಪ್ರಯಾಣ ಮಕ್ಕಳು ಇವುಗಳಿಗೆ ಸಂಬಂಧಿಸಿದಂತಿರುವ ನಂಬಿಕೆಗಳೆಲ್ಲವನ್ನು ಮಾನುಷ ನಂಬಿಕೆಗಳೆಂದು ವರ್ಗೀಕರಿಸಬಹುದು. ಮಾನುಷ ನಂಬಿಕೆಗಳೆಂದರೆ ಮನುಷ್ಯರನ್ನು ಕುರಿತ ನಂಬಿಕೆಗಳು ಈ ವರ್ಗಕ್ಕೆ ಸೇರುವ ನಂಬಿಕೆಗಳು ನಿಮಗೆಲ್ಲರಿಗೂ ಸಾಕಷ್ಟು ಗೊತ್ತಿರುವುದರಿಂದ ನಾನು ಉದಾಹರಣೆಗೆ ಕೊಡುವುದು ಬೇಡ ಅನ್ನಿಸುತ್ತದೆ.

ಪ್ರಾಣಿ ಕೀಟ ಮತ್ತು ಪಕ್ಷಿ ಇವುಗಳಿಗೆ ಸಂಬಂಧಿಸಿದವು ಪ್ರಾಣಿ ನಂಬಿಕೆಗಳು, ಆನೆ ಬಾಲದ ಕೂದಲನ್ನು ತಾಯಿತಿಯ ಒಳಕ್ಕೆ ತುಂಬಿ ಕೊಂಡರೆ ಕೆಟ್ಟ ಕನಸು ಬೀಳುವುದಿಲ್ಲ. ನಾಯಿಗೆ ಬರಲಲ್ಲಿ ಹೊಡೆಯಬಾರದು, ನಾಯಿನಾರಾಯಣ ಸಾವಿರಕಾಲ ನೋಡಿದರೆ ಸಿರಿ ಬರುತ್ತೆ ಮೊದಲಾದ ನಂಬಿಕೆಗಳು ಈ ವರ್ಗದಲ್ಲಿ ಸೇರುತ್ತವೆ.

ಮರ ಗಿಡ ಹೂ ಫಲ ಮತ್ತು ನೀರು ಇವುಗಳಿಗೆ ಸಂಬಂಧಿಸಿದವು ಪ್ರಕೃತಿ ನಂಬಿಕೆಗಳು. ಉದಾಹರಣೆ ಅತ್ತಿ ಹೂ ನೋಡಬೇಕಾದರೂ ಪುಣ್ಯಬೇಕು, ಫಲಬೀಡೋ ಮರವ ಕಡಿಯಬಾರದು. ಸ್ನಾನ ಮಾಡುವಾಗ ಹಂಡೆ ನೀರು ಪೂರ್ತಿ ಹುಯ್ದುಕೊಳ್ಳಬಾರದು.

ಅಡಿಗೆ, ಊಟ, ಮತ್ತು ಬಳಕೆಯ ವಸ್ತುಗಳಿಗೆ ಸಂಬಂಧಿಸಿದವು ಕೌಟುಂಬಿಕ ನಂಬಿಕೆಗಳು. ಅಂದರೆ ಕುಟುಂಬದ ಆವರಣದಲ್ಲಿ ಬರುವ ನಂಬಿಕೆಗಳು, ಉದಾ. ತುತ್ತು ತೂಕ ಮಾಡಬಾರದು, ಒಡೆದ ಕನ್ನಡಿಯನ್ನು ಮನೆಯಲ್ಲಿ ಇಡಬಾರದು, ಅಡಿಗೆ ಆದ ಮೇಲೆ ಹಿಟ್ಟಿನ ಮಡಿಕೆಯ ಮೇಲೆ ಒಲೆ ಬೂದಿಯನ್ನು ಮೂರು ಪಟ್ಟೆ ಬಳಿಬೇಕು. ಇಲ್ಲದಿದ್ದರೆ ದೆವ್ವಗಳು ಬಂದು ತಿನ್ನುತ್ತವಂತೆ ಇತ್ಯಾದಿ.

ಮೇಲೆ ಹೇಳಿದ ಗುಂಪಿಗೆ ಸೇರದಿರುವ ಸಂಕೀರ್ಣ ನಂಬಿಕೆಗಳನ್ನು ಗುರ್ತಿಸುತ್ತೇವೆ.

ಹಿಂದೆ ಕೇವಲ ಜನಪದ ನಂಬಿಕೆಗಳೆಂದು ತಿಳಿದಿದ್ದ ಹಲವಾರು ವಿಷಯಗಳು ಶಿಕ್ಷಣದ ಪ್ರಭಾವದಿಂದಾಗಿ ಅವುಗಳಲ್ಲೂ ಸಹಜತೆಯಿದೆ ಎಂಬುದು ತಿಳಿದು ಬಂದಿದೆ. ಒಂದೆರಡು ಸಹಜ ನಂಬಿಕೆಗಳನ್ನು ವೈಜ್ಞಾನಿಕವಾಗಿ ವಿವರಿಸುತ್ತೇನೆ

ಮಲಗುವಾಗ ಎಡ ಮಗ್ಗಲಗೆ ಮಲಗಬೇಕು.ಏಳುವಾಗ ಬಲ ಮಗ್ಗಲಲ್ಲಿ ಏಳಬೇಕು -ಅನ್ನೋ ನಂಬಿಕೆಯಲ್ಲಿ ಆರೋಗ್ಯಶಾಸ್ತ್ರದ ಸತ್ಯವಿದೆ. ಶರೀರದ ಬಲಬಾಗದಲ್ಲಿ ಪಿತ್ತಕೋಶವಿದೆ. ಅನ್ನಕೋಶಕ್ಕೆ ಪಿತ್ತರಸವು ತೊಟ್ಟು ತೊಟ್ಟಾಗಿ ಬರುತ್ತದೆ. ಈ ಪಚನರಸ ಆಹಾರ ಜೀರ್ಣವಾಗಲು ನೆರವಾಗುತ್ತದೆ.ಸ್ಪಿನ್ ನಾಳದಿಂದ ಅನ್ನಕೋಶಕ್ಕೆ ಬರುತ್ತೆ. ಪಚನರಸ ಹೆಚ್ಚಾಗಿ ಬಂದರೆ ಅಸಿಡಿಟಿ ಆಗುತ್ತೆ. ಅಂದರೆ

ಗ್ಯಾಸ್ಟ್ರಿಕ್ ಜ್ಯೂಸ್ ಅಂದರೆ ಪಚನರಸ ಸಮತೋಲನ ಆಗುತ್ತೆ. ಹೊಟ್ಟೆ ಉಬ್ಬರಿಸಿಕೊಳ್ಳುತ್ತೆ. ಅಜೀರ್ಣವಾಗುತ್ತೆ. ಆದ್ದರಿಂದ ಮಲಗುವಾಗ ಎಡ ಮಗ್ಗಲಗೆ ಮಲಗಿ ಏಳುವಾಗ ಬಲ ಮಗ್ಗಲಿಗೆ ಎದ್ದರೆ ಆರೋಗ್ಯ ಭಾಗ್ಯ ದೊರೆಯುತ್ತದೆ.ಇಂಥ ನಂಬಿಕೆನ ಅನುಸರಿಸಿ.

ಹೊಟ್ಟೆ ಉಬ್ಬರಿಸಿಕೊಂಡ್ರೆ ವಿಭೂತಿ ಮಂತ್ರಿಸಿ ತಿಂದರೆ, ಇಲ್ಲವೆ ಎಡ ಹೊಸ್ತಿಲಿನ ಮೇಲೆ ಬೂದಿ ಹಾಕಿ ಎಡಗಾಲಿನಿಂದ ಮೂರುಸಾರಿ ಉಜ್ಜಿ , ಆ ಬೂದಿ ಇಳಿತೆಗೆದು ಹಾಕಿ ಹೊಟ್ಟೆ ಮೇಲೆ ಸವರಿ, ಒಸಿ ಬೂದಿನ ತಿನ್ನಿಸಿದರೆ ವಾಸಿ ಆಗುತ್ತೆ ಅನ್ನೋ ನಂಬಿಕೆ ನಿಮಗೆ ಗೊತ್ತಿದೆ. ಈ ನಂಬಿಕೆ ಮನಶಾಸ್ತ್ರ ಮತ್ತು ರಸಾಯನಶಾಸ್ತ್ರ ದೃಷ್ಟಿಯಿಂದ ಹೇಳ್ತೆನೆ. ವಿಭೂತಿ ಮಂತ್ರಿಸಿದೆ, ಮಂತ್ರ ಶಕ್ತಿಯಿಂದ ವಾಸಿ ಆಗುತ್ತೆ ಅನ್ನೋದೇ ಮನಸ್ಸಿನಲ್ಲಿ ನಿಂತು, ಮಾನಸಿಕ ಪರಿಣಾಮದಿಂದ ನೋವು ಕಡಿಮೆಯಾಯಿತು ಅನ್ನಿಸುತ್ತದೆ. ಬೂದಿ ಇಂಗಾಲ ಅನ್ನೋದು ರಸಾಯನ ಶಾಸ್ತ್ರದಿಂದ ತಿಳಿದುಬರುತ್ತದೆ. ಅಜೀರ್ಣ ಅಂದರೆ ಗ್ಯಾಸ್‌ಟ್ರಿಕ್‌ನಿಂದ ಹೊಟ್ಟೆ ಉಬ್ಬರಿಸಿಕೊಳ್ಳುತ್ತೆ. ನಾವು ತೆಗೆದುಕೊಂಡ ಬೂದಿ ಅಂದರೆ ಇಂಗಾಲ ಹೊಟ್ಟೆಯಲ್ಲಿ ಅತಿಯಾಗಿದ್ದ ಗ್ಯಾಸನ್ನು ಹೀರುತ್ತೆ, ಕ್ರಮೇಣ ಗುಣವಾಗುತ್ತದೆ.

ಹುಣಸೆ ಮರದ ಕೆಳಗೆ ಕೂತ್ಕೋಬಾರದು, ಮಲಗಬಾರದ್ದು- ದೆವ್ವ ಹಿಡಿದುಕೊಳ್ಳುತ್ತದೆ. ಹುಣಸೆ ಮರದಲ್ಲಿ ಹೆಚ್ಚಾಗಿ ದೆವ್ವ ಇರ್ತವೆ. ಒಂಟಿಯಾಗಿ ಸಿಕ್ಕದವರ ಪ್ರಾಣ ತೆಗಿತವೆ ಅನ್ನೊ ನಂಬಿಕೆನ ವೈಜ್ಞಾನಿಕವಾಘಿ ಯೋಚಿಸಬೇಕು. ಮರಗಿಡಗಳು ಇಂಗಾಲಾಮ್ಲವನ್ನು ವಾತಾವರಣದಿಂದ ಸೆಳೆದುಕೊಂಡು, ತಾವು ಉಪಯೋಗಿಸಿಕೊಂಡು ಆಮ್ಲ ಜನಕ ಅಂದರೆ ಪ್ರಾಣವಾಯುವನ್ನು ನಮಗೆ ಕೊಡುತ್ತವೆ. ಅನ್ನೋದು ವಿಜ್ಞಾನದಿಂದ ತಿಳಿಯುತ್ತೆ. ಹುಣಸೆ ಮರದಲ್ಲಿ ಲೆಗಳು ಒತ್ತಾಗಿರುತ್ತೆ. ಆ ಮರದ ಕೆಳಗೆ ಬೇರೆ ಮರದ ಅಡಿಯಲ್ಲಿರೊದಕ್ಕಿಂತ ಇಂಗಾಲಾಮ್ಲ ಅಂದರೆ ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾಗಿರುತ್ತದೆ. ಮನುಷ್ಯರಿಗೆ ಬೇಕಾದ್ದು ಆಮ್ಲಜನಕ. ಹುಣಸೆಮರದ ಅಡಿಯಲ್ಲಿ ಒಬ್ಬನೇ ಮಲಗಿದರೆ ಕಾರ್ಬನ್ ಡೈ ಆಕ್ಸೈಡ್ ನಿಂದ ಉಸಿರುಕಟ್ಟಿ ಪ್ರಾಣಾಪಾಯ ಆಗಬಹುದು. ಕೆಲವು ವೇಳೆ ಸಾಯಬಹುದು. ವ್ಯಕ್ತಿ ಸತ್ತರೆ ಪ್ರಾಣವಾಯುವಿನಿಂದಲೇ ಹೊರತು ಆ ಮರದಲ್ಲಿ ಇರಬಹುದು ಅನ್ನೋ ದೆವ್ವದಿಂದಲ್ಲ.

**ಕಂಬವ ಕಾಲಿನಲ್ಲಿ ಒದಿಬಾರದು- ಅನ್ನೊನಂಬಿಕೆ ಕುರಿತು ಯೋಚನೆ.**

ನಿಮ್ಮ ಮನೆಯಲ್ಲಿ ತೊಟ್ಟಿ ಮನೆ, ಅದು ನಾಲ್ಕು ಕಂಬದ್ದೂ ಆರು ಕಂಬದ್ದೋ ಆಗಿದೆ ಅಂತ ಭಾವಿಸಿ. ಆ ಮನೆ ತಾತನೋ - ಮುತ್ತಾತನೋ ಕಟ್ಟಿದ್ದು ನೂರಾರುವರ್ಷಗಳಾಗಿರುತ್ತವೆ. ಮನೆಯ ಚಾವಣಿಯ ಭಾರವೆಲ್ಲಾ ತೊಲೆಯ ಮೇಲೂ, ತೊಲೆಯ ಬಾರವೆಲ್ಲ ಕಂಬಗಳ ಮೇಲೂ ಇರುತ್ತೆ. ಅಂದರೆ ಮನೆಗೆ ಕಂಬವೇ ಆಧಾರ, ಮನೆ ಶಿಥಿಲವಾಗಿರುತ್ತೆ, ಬಲ ಶಾಲಿಯಾದವನು ಕಂಬವ ಕಾಲಿನಿಂದ ಒದ್ದರೆ ಕಂಬ ಮುರಿಯುತ್ತೆ. ಕಂಬವ ಆಧಾರದಿಂದ ಮೇಲಿದ್ದ ತೊಲೆ ಚಾವಣಿ ಮುರಿಯುತ್ತೆ. ಆದ್ದರಿಂದ ಕಂಬವ ಕಾಲಿನಿಂದ ಒದಿಬಾರದು. ಅನ್ನೊದು ಈ ಅರ್ಥದಲ್ಲಿ ಇದು ವೈಜ್ಞಾನಿಕವಾಗಿ ಸತ್ಯ ಅಲ್ಲವೆ. ಎಷ್ಟೋ ಸಾರಿ ಹಿರಿಯರ ಈ ಮಾತಿಗೆ ಕಿರಿಯರು ಬೆಲೆ ಕೊಡುವುದಿಲ್ಲ. ಆಗ ಪೌರಾಣಿಕ ಹಿನ್ನಲೆಯನ್ನು ಕಂಬದ ಬಗ್ಗೆ ಇರುವ ಆ ನಂಬಿಕೆಗೆ ಆರೋಪಿಸಿಸುತ್ತಾರೆ. ಪರಮಭಕ್ತನಾದ ಪ್ರಹ್ಲಾದನನ್ನು ರಕ್ಷಿಸುವುದಕ್ಕಾಗಿ ವಿಷ್ಣು ನರಸಿಂಹನ ಅವತಾರ ತಾಳಿ ಕಂಬವನ್ನೇ ಸೀಳಿಕೊಂಡು ಕಂಬದಿಂದ ಬಂದು ಹಿರಣ್ಯಕಶಿಪುವನ್ನು ಕೊಂದ. ಕಂಬ ದೇವರಿಗೆ ಸಮ , ದೇವರು ಕೋಪಿಸಿಕೊಂಡಾನು ಕಾಲಿಂದ ಒದ್ದರೆ. ಒದಿಬಾರದು ಸಣ್ಣು ಮಾಡ್ಕೋಬೇಕು ಅಂತರೆ, ಹಿರಣ್ಯ ಕಶಿಪುವಿನ ದುರಂತ ಸಾವನ್ನು ಯಾರು ಬಯಸುತ್ತಾರೆ. ಈ ಕಥೆ ಕೇಳಿದ ಮಕ್ಕಳು ಕಂಬವ ಕಾಲಿನಿಂದ ಒದಿಯೋ ಸಾಹಸ ಮಾಡುವುದಿಲ್ಲ.

ಈ ಬಗೆಯ ನಂಬಿಕೆಗಳನ್ನು ವೈಜ್ಞಾನಿಕ ನಂಬಿಕೆಗಳೆನ್ನಬಹುದು. ಈಗ ಪೌರಾಣಿಕ ಹಿನ್ನೆಯಲ್ಲಿ ಹುಟ್ಟಿರುವ ಕೆಲವು ನಂಬಿಕೆಗಳನ್ನು ಕುರಿತು ಆಲೋಚಿಸೋಣ.

ಗರ್ಭಿಣಿಯಾದವರನ್ನು ಕರೆತರೋದಕ್ಕೆ ಒಡಹುಟ್ಟಿದವರನ್ನು ಕಳಿಸಬಾರದು ತಂದೆ ತಾಯಿಗಳೇ ಹೋಗಿ ಕರೆತರಬೇಕು. ಈ ನಂಬಿಕೆಗೆ ಸಂಬಂಧಿಸಿದಂತೆ ಮೂರು ಕತೆಗಳನ್ನು ಚಿಕ್ಕದಾಗಿ ಹೇಳೋಣ.

ಕೃಷ್ಣನ ತಂಗಿ ಸುಭದ್ರೆ. ಗರ್ಭಿಣಿಯಾದ ಸುಭದ್ರೆನ ಕೃಷ್ಣ ಕರೆದು ಕೊಂಡು ಬರ್ತಾ ಇದ್ದಾಗ ತಂಗಿ ಆಯಾಸ ಪರಿಹರಿಸಿಕೊಳ್ಳುದಾಕ್ಕೆ ಒಂದು ಕಡೆ ಕುಳಿತಳು. ಅಣ್ಣನ ತೋಡೆ ಮೇಲೆ ತಲೆಯಿಟ್ಟು ಮಲಗಿ ಒಂದು ಕಥೆ ಹೇಳನ್ನ ಅಂದಳು. ಕೃಷ್ಣ ಚಕ್ರವ್ಯೂಹ ಬೇಧಿಸುವ ಯುದ್ಧ ತಂತ್ರದ ಕಥೆ ಹೇಳ್ತಿದ್ದ. ತಂಗಿ ನಿದ್ದೆ ಹೋದಳು. ಗರ್ಭದಲ್ಲಿರೋ ಮಗು ಕಥೆಗೆ ಹ್ಞೂ

ಗುಡುತಿತ್ತು. ಕೃಷ್ಣ ತನ್ನ ದಿವ್ಯ ದೃಷ್ಟಿಯಿಂದ ನೋಡ್ತಾನೆ. ಹಲವಾರು ಕೈಗಳಿರುವ ಮಗು ಕಥೆ ಕೇಳಿಸ್ಕೋಲ್ತಾ ಇದೆ. ಈ ಮಗು ಇಷ್ಟು ಕೈಗಳೊಂದಿಗೆ ಹೊರಜಗತ್ತಿಗೆ ಬಂದರೆ ಕೃಷ್ಣನ ಹೆಸರಿಗೆ ನಾಮ ಹಾಕ್ತಾನೆ ಅಂತ ತಿಳಿದು ತನ್ನ ಚಕ್ರ ಬಿಟ್ಟು ಎರಡು ಕೈಗಳನ್ನು ಮಾತ್ರ ಬಿಟ್ಟು ಹುಳಿದ ಕೈಗಳನ್ನು ಕತ್ತರಿಸಿ ಬಿಟ್ಟನಂತೆ ಮುಂದೆ ಅಭಿಮನ್ಯು ಮಹಾ ಭಾರತ ಯುದ್ಧದಲ್ಲಿ ಚಕ್ರವ್ಯೂಹ ಭೇದಿಸಿ ಒಳಗೆ ಹೋದ. ಹೊರಕ್ಕೆ ಬರುವುದನ್ನು ಕೃಷ್ಣ ಕತೆಯಲ್ಲಿ ಹೇಳಿರಲಿಲ್ಲ. ಆದ್ದರಿಂದ ವ್ಯೂಹದಲ್ಲಿ ಸಿಕ್ಕಿ ಸತ್ತ. ಅಭಿಮನ್ಯುವಿನ ಸಾವಿಗೆ ಕೃಷ್ಣ ಕಾರಣವಲ್ಲವೇ.

ಕಂಸ ತನ್ನ ತಂಗಿಯ ಮಕ್ಕಳನ್ನೆಲ್ಲಾ ಕೊಲ್ಲುತ್ತಿದ್ದ ಕತೆಯನ್ನೂ ನೆನಸಿಕೊಳ್ಳಿ.

ಅಣ್ಣ-ತಂಗಿ ಅಂತ ಜನಪದ ಸೂತ್ರ ಕಥೆ ಇದೆ. ಗರ್ಭಿಣಿ ತಂಗಿಯನ್ನು ಅಣ್ಣ ಕರೆ ತರುತ್ತಿತರ್ತಾನೆ. ಕಾಡಿನ ಮಧ್ಯ ಬಂದಾಗ ನನ್ನ ಹೆಂಡ್ತಿಗೆ ಇಲ್ಲದ ಒಡವೆ ವಸ್ತ್ರ ಇವಳಿಗೆ ಯಾಕೆ ಅಂತ ಅವಳ ಕತ್ತನ್ನು ಕತ್ತರಿಸಿಬಿಟ್ಟು ಕೊಳಕ್ಕೆ ಎಸೆದ. ಆ ಕತ್ತು ಕೊಳದಲ್ಲಿ ತಾವರೆ ಹೂ ವಾಯ್ತು. ಹೆರಿಗೆ ಸುದ್ಧಿಯೆ ಬರಲಿಲ್ಲ. ಅಂತ ಗಂಡ ಅದೇ ಮಾರ್ಗವಾಗಿ ಬಂದು ತಾವರೆ ಹೂವಿನ ಚಂದಕ್ಕೆ ಸೋತು ಕಿತ್ತುಕೊಂಡು ಹೋಗಿ ಮಗುಗೆ ಕೋಡೊಣ ಅಂತ ಕೊಲದ ಹೂ ಕೀಳೋಕ್ಕೆ ಹೋದಾಗ-

'ಮುಟ್ಟ ಬ್ಯಾಡ ಮುಟ್ಟಬ್ಯಾಡ ಗಂಡಯ್ಯ
ಮುಟ್ಟಿದರೆ ಹೂ ಬಾಡೀತು

ಅಣ್ಣ ಅನ್ನೋ ಸೂಳೆ ಮಗ ಕಚ್ಚಕ್ಕನೆ ಕಡಿದ' ಅಂತ ಹೂ ಹೇಳ್ತದೆ. ಇದನ್ನೆಲ್ಲಾ ತಿಳಿದಿರೋ ಹಿರಿಯರು ಗರ್ಭಿಣಿಯನ್ನು ಕರೆತರೋಕೆ ಒಡಹುಟ್ಟಿದವರನ್ನು ಕಳಿಸದೆ ತಾವೇ ಹೋಗ್ತಾರೆ.

ಸೋಮವಾರ ಏರು ಕಟ್ಟಬಾರದು, ಸೋಮವಾರ ಉತ್ತರಾಣಿ ಹುಟ್ಟಿದವಾರ. ಈ ನಂಬಿಕೆಗಳು ಐತಿಹ್ಯಗಳ ಆಧಾರದ ಮೇಲೆ ಹುಟ್ಟಿವೆ. ಶಿವ ಬಸವನಿಗೆ ಭೂಲೋಕಕ್ಕೆ ಹೋಗಿ ಒಪ್ಪೊತ್ತು ಊಟ ಎಂದು ಸಾರಿ ಬಾ ಎಂದಾಗ ಭೂಮಿಗೆ ಬಂದ ಬಸವ ಮೂರು ಹೊತ್ತು ಊಟ ಅಂತ ಸಾರಿದ ಫಲವಾಗಿ ಎತ್ತಾಗಿ ಭೂಮಿಗೆ ಬಂದ. ಆತ ಬಂದದ್ದು ಸೋಮವಾರ . ಆತ ಹುಟ್ಟಿದ ವಾರ ಏರು ಕಟ್ಟ ಬಾರದು ಅನ್ನೋ ನೆನಪಿಗೆ ಉತ್ತರಾಣಿ ಹುಟ್ಟಿತಂತೆ.

ಮುಸ್ಸಂದೆಯಲ್ಲಿ ಹೊಸ್ತಿಲ ಮೇಲೇ ನಿಲ್ಲಬಾರದು ,ಕುಳಿತುಕೊಳ್ಳಬಾರದು- ಅನ್ನೋ ನಂಬಿಕೆಯು ಹಿರಣ್ಯ ಕಶಿಪುವನ್ನು ನರಸಿಂಹ ಮುಸ್ಸಂಜೆಯಲ್ಲಿ ಹೊಸ್ತಿಲ ಮೇಲಿರಿಸಿ ಕೊಂಡ ಕಥೆಯ ಹಿನ್ನೆಯಲ್ಲಿ ಹುಟ್ಟಿದೆ.

ಬಡಗಲಾಗಿ ಮಲಗಬಾರದು ಗಣೇಶನ ಕುತ್ತಿಗೆಯನ್ನು ಶಿವನೇ ಕತ್ತರಿಸಿದ ಸಂದರ್ಭದಲ್ಲಿ ಪಾರ್ವತಿ ತಾನೇ ತನ್ನ ಬೆವರ ಹನಿಗಳಿಂದ ಸೃಷ್ಟಿಸಿದ ಗಣೇಶನನ್ನು ಬದುಕಿಸಿಕೊಡಿ ಎಂದು ಕೇಳಿದಾಗ ಉತ್ತರಕ್ಕೆ ತಲೆಯಿಟ್ಟು ಮಲಗಿರೋರನ್ನು ಕತ್ತರಿಸಿ ತನ್ನಿ ಎಂದು ತನ್ನವರಿಗೆ ಹೇಳಿದಾಗ ಬಡಲಾಗಿ ಮಲಗಿದ್ದ ಆನೆಯನ್ನು ಕತ್ತರಿಸಿ ತಂದು ಗಣೇಶನಿಗೆ ಜೋಡಿಸಿದರು ಆಗ ಗಜಾನನ ಎನ್ನಿಸಿಕೊಂಡ.

ಕಸವ ಹೊಸ್ತಿಲಬಳಿ ಬರಲಿಂದ ಚಿಮ್ಮಿಸಬಾರದು. ಚಿಮ್ಮಿಸಿದರೆ ಕಣ್ಣಿಗೆ ಕಸಬಿದ್ದು ಕಣ್ಣ ಬೇನೆ ಆಗುತ್ತೆ. ರಾತ್ರಿ ಮನೆ ಕಸನ ಹೊರಕ್ಕೆ ಹಾಕಬಾರದು ಹಾಕಿದರೆ ಮಕ್ಕಳು ಕೈ ತಪ್ಪ ಕೆಡವಿದ್ದ ಹಣ , ಮಡದಿ ಮರೆತಿಟ್ಟ ಹಣ ಆಭರಣ, ಇತ್ಯಾದಿ ಬೀದಿ ಪಾಲಾಗುತ್ತದೆ. ಅನ್ನೋ ಸಾಮಾನ್ಯ ತಿಳಿವಳಿಕೆಯ ಹಿನ್ನೆಯಲ್ಲಿ ಆ ಎರಡು ನಂಬಿಕೆಗಳು ಹುಟ್ಟಿವೆ. ಅರ್ಥವಿರುವ ಇಂಥ ನಂಬಿಕೆಗಳನ್ನು ಅನುಸರಿಸಿ ಅರ್ಥವಿಲ್ಲ ಅನ್ನಿಸಿದ ನಂಬಿಕೆಗಳನ್ನು ಬಿಡಿ.

ತುಂಬಿಕ ಕೆರೆಗೆ ಕಲ್ಲು ಹೊಡೆಯಬಾರದು, ಉಂಡ ಮನೆಗೆ ಎರಡು ಬಗೆಯ ಬಾರದು ಅಥವಾ ಉಂಡುಮನೆ ಗಳು ಎಣಿಸಬಾರದು, ಬಲಗೈಲಿ ಕೊಟ್ಟರೆ ಎಡಗೈಗೆ ಗೊತ್ತಾಗ ಬಾರದು -ಮೊದಲಾದ ನಂಬಿಕೆಗಳು ಹೇಳ ಬೇಕಾದ ವಿಷಯವನ್ನು ಸೂಚ್ಯವಾಗಿ ಸಂಕ್ಷಿಪ್ತವಾಗಗಿ ಸಾಂಕೇತಿಕವಾಗಿ ಪರಿಣಾಮಕಾರಿಯಾಗಿ ಹೇಳುತ್ತವೆ. ಇವು ಗಾದೆಯಂತೆ ಕಂಡರೂ ಅಂತರಂಗ ನಂಬಿಕೆ, ಇವುಗಳ ಭಾಷೆ ಕಾವ್ಯಮಯವಾಗುದ್ದು, ಕಾವ್ಯಾಂಶದಿಂದ ಕಂಗೊಳಿಸುತ್ತವೆ. ತುಂಬಿದ ಕೆರೆಗೆ ಕಲ್ಲು ಹಾಕಿದರೆ ಕೆರೆ ಮುಚ್ಚುತ್ತಾ ಬರುತ್ತೆ, ನೀರಿನ ಪ್ರಮಾಣ ಕಡಿಮೆ ಆಗಿ ಬೇಸಾಯಕ್ಕೆ ತೊಂದರೆ ಆಗಿ ಬೆಳೆ ಕಡಿಮೆ ಆಗುತ್ತೆ, ಇಂಥ ಸಾಮಾಜಿಕ ಅನ್ಯಾಯವನ್ನು ಮಾಡಬಾರದೆಂಬ ಸಂದೇಶವನ್ನು ಪ್ರತಿಮಾ ವಿಧಾನದಲ್ಲಿ ಹೇಳಿದೆ. ಉಂಡ ಮನೆಗೆ ದ್ರೋಹ ಮಾಡಬಾರದು, ಅನ್ನ ಹಾಕಿದ ಮನೆಗೆ ಕನ್ನ ಹಾಕಬಾರದು ಎಂಬ ನೀತಿ ಪ್ರಧಾನವಾದ ನಂಬಿಕೆಗಳು ಬದುಕಿನಲ್ಲಿ ಬೆರೆತು ಬಾಳಲು ಮಾರ್ಗದರ್ಶಿಯಾಗಿವೆ. ದಾನಗುಣ ಗುಪ್ತವಾಗಿರಬೇಕು.

ಜನಮೆಚ್ಚಲೆಂದಲ್ಲ ಶಿವ ಮೆಚ್ಚಲೆಂದು ದಾನ ಮಾಡುವ ವ್ಯಕ್ತಿತ್ವ ಬೆಳಸಿಕೊಳ್ಳಬೇಕು. ಎಂಬುದನ್ನು ಬಲಗೈ ಮಾಡಿದ ದಾನ ಮಾಡುವ ವ್ಯಕ್ತಿತ್ವ ಬೆಳಸಿಕೊಳ್ಳಬೇಕು. ಎಂಬುದನ್ನು ಬಲಗೈ ಮಾಡಿದ ದಾನ ಎಡಗೈಗೆ ತಿಳಿಯಬಾರದು ಎನ್ನುತ್ತಾರೆ. ಆದ್ದರಿಂದ ಬಹಳಷ್ಟು ನಂಬಿಕೆಗಳು ವಿಷಯವನ್ನು ಅಡಕವಾಗಿ ಹೇಳುತ್ತೇವೆ. ಆದ್ದರಿಂದ ಬಹಳಷ್ಟು ನಂಬಿಕೆ ಕಾವ್ಯಾಂಶವುಳ್ಳವಾಗಿದ್ದು ಅರ್ಥಪೂರ್ಣವಾಗಿವೆ. ಮೌಲ್ಯಧಾರಿತವಾಗಿವೆ.

ವಿಶ್ವದ ಎಲ್ಲ ಧರ್ಮ ನಂಬಿಕೆಗಳಿವೆ. ವಿಪತ್ತು ಬಂದಾಗ ಬೈಬಲ್ ಒಂದು ಪುಟ ತೆರೆದು ಓದಿದರೆ ಕಷ್ಟ ಪರಿಹಾರವಾಗುತ್ತದೆಂಬುದು, ಕ್ರೈಸ್ತಧರ್ಮೀಯರ ನಂಬಿಕೆ. ಆಪತ್ಕಾಲದಲ್ಲಿ ಭಗವದ್ಗೀತೆಯ ಪ್ರವಚನ ಇಲ್ಲವೆ ಪುರಾಣ ಪ್ರವಚನ ಮಾಡಿದರೆ ಕಷ್ಟ ಪರಿಹಾರವಾಗುತ್ತದೆಂಬುದು, ಹಿಂದೂಗಳ ನಂಬಿಕೆ, ಹಿಂದೂಗಳು ಆಕಳಿಕೆ ಬಂದಾಗ ಬಾಯಿ ಮುಂದೆ ಚಿಟಿಕೆ ಹೊಡೆದು ದೇವರ ನಾಮ ಸ್ಮರಣೆ ಮಾಡುವುದು. ಏಕೆಂದರೆ ಆಕಳಿಸುವಾಗ ಆತ್ಮ ಹೊರೆಗೆ ಹೋಗಿರುತ್ತೆ. ಮರಳಿ ಬರುವಷ್ಟರಲ್ಲಿ ಗಾಳಿ ದೆವ್ವ ಸೇರುತ್ತವೆ, ಅವು ಸೇರದಿರಲೆಂದು ದೇವರ ನಾಮಸ್ಮರಣೆ ಚಿಟಿಕೆ ಹೊಡೆಯುತ್ತಾರೆ. ಕ್ರೈಸ್ತರು ಆಕಳಿಸುವಾಗ ಮಧ್ಯದ ಬೆರಳಿನಿಂದ ಎದೆಯ ಮೇಲೆ ಶಿಲುಬೆಯ ಗುರುತನ್ನು ಮಾಡುತ್ತಾರೆ. ಹಿಂದು ಮತ್ತು ಕ್ರೈಸ್ತರು ಧರ್ಮದ ಈ ನಂಬಿಕೆಗಳು ಸಮಾನವಾದವು. ಪರಸ್ಪರ ಹೋಲುವಂಥವು. ಪಿತೃಗಳನ್ನು ಪೂಜಿಸಿದರೆ ಒಳ್ಳೆಯದಾಗುತ್ತದೆಂಬ ನಂಬಿಕೆ ಚೀನಾದಲ್ಲಿದೆ. ಈ ನಂಬಿಕೆ ನಮ್ಮಲ್ಲೂ ಇರುವುದರಿಂದ ಪಿತೃಪಕ್ಷವನ್ನಾಚರಿಸುತ್ತೇವೆ. ಹುಟ್ಟಿಗೆ ಸಂಬಂಧಸಿದಂತೆ ಹೆಣ್ಣು ಮಕ್ಕಳೇ ಆಗುತ್ತಿದ್ದರೆ ಕೊನೆಯ ಹೆಣ್ಣು ಮಗುವಿಗೆ ಗಂಡು ಮಗುವಿನ ಹೆಸರಿಟ್ಟರೆ ಮುಂದೆ ಗಂಡು ಮಕ್ಕಳಾಗುತ್ತವೆಂಬ ನಂಬಿಕೆ ಚೀನಾದಲ್ಲಿದೆ. ಹೆಣ್ಣು ಮಕ್ಕಳೇ ಆಗುತ್ತಿದ್ದರೆ, ಸಾಕಮ್ಮ ಎಂಬ ಹೆಸರಿಟ್ಟರೆ ಮುಂದೆ ಮಕ್ಕಳಾಗುವುದಿಲ್ಲ ನಂಬಿಕೆ ನಮ್ಮಲ್ಲಿದೆ. ಯೂರೋಪ್, ಗ್ರೀಸ್, ಜರ್ಮನಿ ದೇಶಗಳ ಜನರು ಮನೆಯಲ್ಲಿ ಕನ್ನಡಿ ಒಡೆದರೆ ಮನೆಯಲ್ಲಿ ದುಷ್ಟಶಕ್ತಿಯ ಸಂಚಾರವಾಗಿದೆ ಎಂದು ನಂಬುತ್ತಾರೆ. ಕನ್ನಡಿ ಒಡೆದರೆ ಅಶುಭ ಎಂಬ ನಂಬಿಕೆ ನಮ್ಮ ದೇಶದಲ್ಲಿದೆ. ಜಗತ್ತಿನ ನಂಬಿಕೆಗಳನ್ನು ಗಮನಿಸಿದಾಗ ಮನುಷ್ಯಕುಲ ಒಂದೇ ಎಂಬುದು ಸ್ಪಷ್ಟವಾಗುತ್ತದೆ.

ಹಳೇ ಕಲ್ಪನೆ ಬರೇ ನಂಬಿಕೆಗಳೇ ಆಗಿರಬಹುದು. ಆದರೆ ಆ ನಂಬಿಕೆಗಳ ಮುದ್ದೆಯಲ್ಲೂ ಸತ್ಯಾಂಶದ ಬಂಗಾರದ ಗಟ್ಟಿಗಳಿವೆ. ಹೊರಗಿನ ಕಸವನ್ನೆಲ್ಲಾ ತೆಗೆದು ಒಳಗಿನ ಆ ಚಿನ್ನದ ಗಟ್ಟಿಯನ್ನು ಉಳಿಸಿಕೊಳ್ಳುವ ವಿಧಾನ ನೀವು ಕಂಡು ಹಿಡಿದಿರುವೆರೇನು?ಎಂದು ಪ್ರಶ್ನಿಸಿದ ಸ್ವಾಮಿ ವಿವೇಕಾನಂದರ ಪ್ರಶ್ನೆಗೆ ಉತ್ತರವೀಯುವ ಚೈತನ್ಯವನ್ನು ನಾವು ಇನ್ನೂ ಪಡೆದುಕೊಳ್ಳಬೇಕಾಗಿದೆ.